**C**

**CCE PR**
**REVISED**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2019**

**S.S.L.C. EXAMINATION, JUNE, 2019**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 28. 06. 2019 ] **ಸಂಕೇತ ಸಂಖ್ಯೆ : 62-K**

Date : 28. 06. 2019 ] **CODE NO. : 62-K**

## ವಿಷಯ : ತೃತೀಯ ಭಾಷೆ — ಕನ್ನಡ

## Subject : Third Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'**<br>**(ಗದ್ಯ, ಪದ್ಯ, ಪೂರಕ ಅಧ್ಯಯನ)**<br>**ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ (ವಾಕ್ಯ ರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | 16 × 1 = 16 |
| 1. | ಮಿನಿ ಪೊಲೀಸ್ ನಗರದಲ್ಲಿ ದಾರಿತಪ್ಪಿದ ಗೊರೂರರಿಗೆ ರಾತ್ರಿ ಆಶ್ರಯ ನೀಡಿದವರು ಯಾರು ?<br>***ಉತ್ತರ :***<br>ಮಿನಿ ಪೊಲೀಸ್ ನಗರದಲ್ಲಿ ದಾರಿತಪ್ಪಿದ ಗೊರೂರರಿಗೆ ರಾತ್ರಿ ಆಶ್ರಯ ನೀಡಿದವರು ಒಬ್ಬ ಟ್ರಾಫಿಕ್ ಪೊಲೀಸ್. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | ಶರೀಫರು ಯಾವ ಮಾತನ್ನು ಹುಸಿಗೊಳಿಸಿದರು ?<br>***ಉತ್ತರ :***<br>ಶರೀಫರು ತತ್ವವಿವೇಚನೆ, ಶಾಸ್ತ್ರಶ್ರವಣ ಮುಂತಾದವುಗಳು ಕೇವಲ ಉಚ್ಚಜನರ ಸೊತ್ತೆಂಬ ಮಾತನ್ನು ಹುಸಿಗೊಳಿಸಿದರು. | |
| 3. | ಶರೀಫರ ಮೇಲಿನ ಪೂಜ್ಯ ಭಾವನೆಯಿಂದ ದವಸ ಧಾನ್ಯಗಳನ್ನು ನೀಡುತ್ತಿದ್ದವರು ಯಾರು ?<br>***ಉತ್ತರ :***<br>ಶರೀಫರ ಮೇಲಿನ ಪೂಜ್ಯ ಭಾವನೆಯಿಂದ ದವಸ ಧಾನ್ಯಗಳನ್ನು ನೀಡುತ್ತಿದ್ದವರು ಗುಡಿಗೇರಿ ಕುಲಕರ್ಣಿ. | |
| 4. | ರಾಮಸಿಂಗನು ಯಾವ ಚಳವಳಿಯ ಮುಂದಾಳತ್ವ ವಹಿಸಿದ್ದನು ?<br>***ಉತ್ತರ :***<br>ರಾಮಸಿಂಗನು 'ಚಲೇಜಾವ್ ಚಳವಳಿ'ಯ ಮುಂದಾಳತ್ವ ವಹಿಸಿದ್ದನು. | |
| 5. | ಗಾಂಧೀಜಿಯವರು ಕೊಟ್ಟ ಮಂತ್ರ ಯಾವುದು ?<br>***ಉತ್ತರ :***<br>ಗಾಂಧೀಜಿಯವರು ಕೊಟ್ಟ ಮಂತ್ರ 'ಮಾಡು, ಇಲ್ಲವೆ ಮಡಿ'. | |
| 6. | ದೇಸಾಯಿ ಈಶಪ್ರಭು ಕಿಡಿಕಿಡಿಯಾದುದೇಕೆ ?<br>***ಉತ್ತರ :***<br>ಶಿವಾಜಿ ಸೈನಿಕರು ಸುತ್ತಮುತ್ತಲಿನ ಹಳ್ಳಿಗರ ಹಸು, ಎಮ್ಮೆಗಳನ್ನು ಅಪಹರಿಸಿಕೊಂಡು ಹೋಗಿ ಅವರಿಗೆ ಕಿರುಕುಳ ಕೊಡುವುದನ್ನು ಕೇಳಿ ದೇಸಾಯಿ ಈಶಪ್ರಭು ಕಿಡಿಕಿಡಿಯಾದನು. | |
| 7. | ಕಿತ್ತೂರು ಚೆನ್ನಮ್ಮ ಸೆರೆಯಲ್ಲಿದ್ದಾಗ ಸಂಧಿಸಲು ಬಂದ ವೀರ ಯಾರು ?<br>***ಉತ್ತರ :***<br>ಕಿತ್ತೂರು ಚೆನ್ನಮ್ಮ ಸೆರೆಯಲ್ಲಿದ್ದಾಗ ಸಂಧಿಸಲು ಬಂದ ವೀರ 'ಸಂಗೊಳ್ಳಿ ರಾಯಣ್ಣ'. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 8. | ಸತೀಶ ಕುಲಕರ್ಣಿಯವರು ಕಟ್ಟ ಬಯಸಿರುವ ನಾಡು ಎಲ್ಲರೂ ಮೆಚ್ಚುವಂಥದ್ದು ಏಕೆ ?<br>*ಉತ್ತರ :*<br>ಸತೀಶ ಕುಲಕರ್ಣಿಯವರು ಗೋಳಿಲ್ಲದ, ಗುಂಡಿಲ್ಲದ ನಾಡನ್ನು ಕಟ್ಟ ಬಯಸಿರುವುದು ಎಲ್ಲರೂ ಮೆಚ್ಚುವಂಥದ್ದು. | |
| 9. | 'ಭೂಮಿತಾಯ ಕುಡಿಗಳು' ಪದ್ಯದಲ್ಲಿ ಕವಿ ಯಾರು ಯಾರು ಒಂದು ಎಂದು ಹೇಳಿದ್ದಾರೆ ?<br>*ಉತ್ತರ :*<br>'ಭೂಮಿತಾಯ ಕುಡಿಗಳು' ಪದ್ಯದಲ್ಲಿ ನಾವು ನೀವು ಅವರು ಇವರು ಒಂದು ಎಂದು ಹೇಳಿದ್ದಾರೆ. | |
| 10. | ಕಳಸ, ಶಿಲುಬೆ, ಬಿಳಿ ಮಿನಾರು ಇವು ಯಾವ ಧರ್ಮದ ಸಂಕೇತಗಳಾಗಿವೆ ?<br>*ಉತ್ತರ :*<br>ಕಳಸ, ಶಿಲುಬೆ, ಬಿಳಿ ಮಿನಾರು ಇವು ಹಿಂದೂ, ಕ್ರಿಶ್ಚಿಯನ್, ಇಸ್ಲಾಂ ಧರ್ಮಗಳ ಸಂಕೇತಗಳಾಗಿವೆ. | |
| 11. | ಬಸವಣ್ಣನವರ ಪ್ರಕಾರ ದೇವಲೋಕ ಯಾವುದು ?<br>*ಉತ್ತರ :*<br>ಬಸವಣ್ಣನವರ ಪ್ರಕಾರ ಸತ್ಯವನ್ನು ನುಡಿಯುವುದೇ ದೇವಲೋಕ. | |
| 12. | ಸ್ವರ್ಗ–ನರಕಗಳ ಬಗೆಗೆ ಬಸವಣ್ಣನವರು ಕೊಟ್ಟಂತಹ ಹೊಸ ಸೂತ್ರ ಯಾವುದು ?<br>*ಉತ್ತರ :*<br>ಸ್ವರ್ಗ–ನರಕಗಳ ಬಗೆಗೆ ಬಸವಣ್ಣನವರು ಆಚಾರವೇ ಸ್ವರ್ಗ, ಅನಾಚಾರವೇ ನರಕ ಎಂಬ ಹೊಸ ಸೂತ್ರವನ್ನು ಕೊಟ್ಟಿದ್ದಾರೆ. | |
| 13. | ಪುಲಿಗೆರೆ ಸೋಮನಾಥ ಹೇಳಿರುವಂತೆ ಋಷಿಯಲ್ಲಿ ಯಾವ ಗುಣವಿರಬೇಕು ?<br>*ಉತ್ತರ :*<br>ಪುಲಿಗೆರೆ ಸೋಮನಾಥ ಹೇಳಿರುವಂತೆ ಋಷಿಯಲ್ಲಿ ಪರಿಶುದ್ಧತೆ ಇರಬೇಕು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 14. | ರಾಜನಾಗಲು ಯಾವ ಗುಣಗಳನ್ನು ಹೊಂದಿರಬೇಕೆಂದು ಸೋಮೇಶ್ವರ ಶತಕದಲ್ಲಿ ತಿಳಿಸಲಾಗಿದೆ ?<br>***ಉತ್ತರ :***<br>ರಾಜನಾಗಲು ಯಾರು ಏನೆಂದರೂ ಕೋಪಿಸಿಕೊಳ್ಳದೆ ತಾಳ್ಮೆಯಿಂದ ಇರುವ ಗುಣಗಳನ್ನು ಹೊಂದಿರಬೇಕೆಂದು ಸೋಮೇಶ್ವರ ಶತಕದಲ್ಲಿ ತಿಳಿಸಲಾಗಿದೆ. | |
| 15. | ಧರ್ಮಪದನು ವಿಶುವಿನ ಬಳಿಗೆ ಏಕೆ ಬಂದನು ?<br>***ಉತ್ತರ :***<br>ಧರ್ಮಪದನು ಕೋನಾರ್ಕ್ ದೇವಾಲಯದ ಮಹಾದ್ವಾರಕ್ಕೆ ಕಲಶ ಕೂಡಿಸಲು ವಿಶುವಿನ ಬಳಿಗೆ ಬಂದನು. | |
| 16. | ವಿಶುವಿನ ಎದೆಯಲ್ಲಿ ಎಂದೆಂದಿಗೂ ನಿಲ್ಲದಂತೆ ಮೊಳಗುತ್ತಿದ್ದ ಪದ ಯಾವುವು ?<br>***ಉತ್ತರ :***<br>ವಿಶುವಿನ ಎದೆಯಲ್ಲಿ ಎಂದೆಂದಿಗೂ ನಿಲ್ಲದಂತೆ ಮೊಳಗುತ್ತಿದ್ದ ಪದ 'ಮಹಾಶಿಲ್ಪಿ'. | |
| | **ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸುವಿಕೆ :**<br>(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು) | $14 \times 2 = 28$ |
| 17. | ಕೊಡಗಿನ ಗೌರಮ್ಮನವರ ಬರವಣಿಗೆಗೆ ಪೂರಕವಾದ ವಿಚಾರಗಳು ಯಾವುವು ?<br>***ಉತ್ತರ :***<br>ಕೊಡಗಿನ ಗೌರಮ್ಮನವರ ಮನೆಯಲ್ಲಿ ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ದ.ರಾ. ಬೇಂದ್ರೆ ಮುಂತಾದ ಹೆಸರಾಂತ ಲೇಖಕರು ಮೊಕ್ಕಾಂ ಹೂಡುತ್ತಿದ್ದರು. ಪ್ರಸಿದ್ಧ ಸಾಮಾಜಿಕ ಕಾರ್ಯಕರ್ತೆ ಮತ್ತು ಲೇಖಕಿಯಾಗಿದ್ದ ಆರ್. ಕಲ್ಯಾಣಮ್ಮ ಅವರೊಡನೆ ಸಂಪರ್ಕ ಇಟ್ಟುಕೊಂಡಿದ್ದರು. ಹೀಗಾಗಿ ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದ ಚರ್ಚೆ, ಬದಲಾವಣೆಗಳು ಕೊಡಗಿನ ಗೌರಮ್ಮನವರ ಬರವಣಿಗೆಗೆ ಪೂರಕವಾದವು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 18. | ಕೊಡಗಿನ ಗೌರಮ್ಮನವರು ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ಹೇಗೆ ತೊಡಗಿಸಿಕೊಂಡರು ?<br>*ಉತ್ತರ :*<br>ಕೊಡಗಿನ ಗೌರಮ್ಮನವರು ರಾಜಕೀಯ ಪರಿಜ್ಞಾನವನ್ನು ಹೊಂದಿದ್ದು ಗಾಂಧೀಜಿಯವರ ಬಗ್ಗೆ ಅಪರಿಮಿತವಾದ ಅಭಿಮಾನ ಬೆಳೆಸಿಕೊಂಡಿದ್ದರು. ಸ್ವಾತಂತ್ರ್ಯ ಚಳವಳಿಯಲ್ಲಿ ತೀವ್ರವಾದ ಆಸಕ್ತಿಯನ್ನು ಹೊಂದಿದ್ದ ಇವರು ಖಾದಿ ಬಟ್ಟೆಗಳನ್ನು ಧರಿಸುತ್ತಿದ್ದರು. ಗಾಂಧೀಜಿಯವರ ಪರಮ ಅನುಯಾಯಿಯಾಗಿದ್ದ ಇವರು ತಮ್ಮ ಇಪ್ಪತ್ತೊಂದನೆ ವಯಸ್ಸಿನಲ್ಲಿ ಉಪವಾಸ ಸತ್ಯಾಗ್ರಹ ಮಾಡಿ ಗಾಂಧೀಜಿಯವರು ಸಾಧಾರಣ ಕುಟುಂಬದವರ ಮನೆಗೂ ಬರಬೇಕೆಂಬ ತಮ್ಮ ಹಠವನ್ನು ಸಾಕಾರಗೊಳಿಸಿಕೊಂಡರು. ಗಾಂಧೀಜಿಯವರ ಸ್ವಾತಂತ್ರ್ಯ ಸಂಗ್ರಾಮ ಮತ್ತು ಹರಿಜನೋದಾರ ನಿಧಿಗೆ ತಮ್ಮ ಒಡವೆಗಳನ್ನು ನೀಡಿ ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. | |
| 19. | ಗಾಂಧೀಜಿಯವರು ಅವಾಕ್ಕಾಗಲು ಕಾರಣವೇನು ?<br>*ಉತ್ತರ :*<br>ಗೌರಮ್ಮನವರ ಉಪವಾಸವನ್ನು ಅಂತ್ಯಗೊಳಿಸಿದ ಗಾಂಧೀಜಿ ಗೌರಮ್ಮನವರಿಗೆ ಕೊಟ್ಟ ಮಾತಿನಂತೆ ಅವರ ಮನೆಗೂ ಬಂದರು. ಆಗ ಗೌರಮ್ಮನವರು ಗಾಂಧೀಜಿಯವರ ಸ್ವಾತಂತ್ರ್ಯ ಸಂಗ್ರಾಮ ಮತ್ತು ಹರಿಜನೋದ್ಧಾರ ಸಂಬಂಧ ನಿಧಿಗೆ, ತನ್ನ ಕೊರಳಿನ ಮಂಗಳಸೂತ್ರ, ಕಿವಿಯ ಓಲೆ ಮತ್ತು ಮೂಗುಬೊಟ್ಟಿನ ಹೊರತಾಗಿ ಉಳಿದೆಲ್ಲಾ ಒಡವೆಗಳನ್ನೂ ಮಹಾತ್ಮರ ಕೈಗೆ ಕೊಟ್ಟಾಗ ಗಾಂಧೀಜಿಯವರು ಅವಕ್ಕಾದರು. | |
| 20. | ಗುರು ಗೋವಿಂದಭಟ್ಟರ ಗುಣಸ್ವಭಾವವನ್ನು ತಿಳಿಸಿ.<br>*ಉತ್ತರ :*<br>ಗುರುಗೋವಿಂದ ಭಟ್ಟರು ಜ್ಞಾನಿಗಳು, ವಿದ್ಯಾವಂತರೂ ಆಗಿದ್ದು ನಗೆಮೊಗದ ಪ್ರಸಾದವಾಣಿಯ ದಿವ್ಯ ವ್ಯಕ್ತಿಗಳಾಗಿದ್ದರು. ಉದಾರ ಹೃದಯಿಗಳಾದ ಇವರು ಮಾನವ ಕುಲ ಒಂದೇ ಎಂಬ ಭಾವನೆಯುಳ್ಳವರಾಗಿದ್ದರು. ಇವರಿಗೆ ಜಾತಿ ಮತಗಳ ಭೇದವಿರಲಿಲ್ಲ. ಸ್ವಜಾತೀಯನಲ್ಲದ ತಮ್ಮ ಮುಸಲ್ಮಾನ ಶಿಷ್ಯನಿಗೆ ಮುಕ್ತ ಹೃದಯದಿಂದ ವಿದ್ಯಾದಾನ ಮಾಡಿದರು. ಗುರುಶಿಷ್ಯರಿಬ್ಬರೂ ಒಂದೇ ತಟ್ಟೆಯಲ್ಲಿ ಊಟ ಮಾಡುತ್ತಿದ್ದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 21. | ಶರೀಫರ ಬಾಲ್ಯವು ಹಿಂದೂ ಪರಂಪರೆಯೊಂದಿಗೆ ಹೇಗೆ ಬೆರೆತುಹೋಗಿತ್ತು ?<br>*ಉತ್ತರ :*<br>ಶರೀಫರ ಪ್ರಾಥಮಿಕ ಶಿಕ್ಷಣವು ಕನ್ನಡ ಕೂಲಿ ಮಠದಲ್ಲಿ ಆಯಿತು. ಬಾಲ್ಯದಲ್ಲಿಯೇ ರಾಮಾಯಣ, ಮಹಾಭಾರತ ಅಲ್ಲಮ ಪ್ರಭುಗಳ ಬಯಲಾಟದಲ್ಲಿ ಭಾಗವಹಿಸುತ್ತಿದ್ದರು. ಜಾತ್ರೆ, ಉತ್ಸವಗಳಲ್ಲಿ ಸರ್ವಜ್ಞ, ನಿಜಗುಣಯೋಗಿ, ಸರ್ಪಭೂಷಣ ಶಿವಯೋಗಿ ಮೊದಲಾದವರ ಕಾವ್ಯ ವಾಚನ ಮಾಡುತ್ತಿದ್ದರು. ಹೀಗೆ ಶರೀಫರ ಬಾಲ್ಯ ಹಿಂದೂ ಪರಂಪರಯೊಂದಿಗೆ ಬೆರೆತು ಹೋಗಿತ್ತು. | |
| 22. | ಕೆಳದಿ ಚೆನ್ನಮ್ಮನು ತನ್ನ ರಾಜಧಾನಿಯನ್ನು ಭುವನಗಿರಿಗೆ ಏಕೆ ಸ್ಥಳಾಂತರಿಸಿದಳು ?<br>*ಉತ್ತರ :*<br>ಮೊಘಲರಿಗೆ ಅಂಜಿ ತಲೆಮರೆಸಿಕೊಂಡು ಬಂದ ರಾಜಾರಾಮನಿಗೆ ಚೆನ್ನಮ್ಮ ಆಶ್ರಯ ನೀಡಿದಳು. ಆಗ ಔರಂಗಜೇಬ್ ತನ್ನ ಮಗ ಅಜಮತಾರನ ಜೊತೆಗೆ ಭಾರಿ ಸೈನ್ಯವನ್ನು ಕಳಿಸಿದನು. ಚಾಣಾಕ್ಷಳಾದ ಚೆನ್ನಮ್ಮ ಸುತ್ತಲಿನ ಬೆಟ್ಟ ಕಣಿವೆ, ಇಕ್ಕಟ್ಟುದಾರಿ, ಕಾಲುದಾರಿ, ಕಳ್ಳದಾರಿಗಳಲ್ಲಿ ತನ್ನ ಸೈನಿಕರನ್ನು ನಿಲ್ಲಿಸಿ ಮೊಘಲ್ ಸೇನೆಗೆ ಅನ್ನ, ನೀರು ಸಿಗದಂತೆ ಮಾಡುವ ಉದ್ದೇಶದಿಂದ ಚನ್ನಮ್ಮ ತನ್ನ ರಾಜಧಾನಿಯನ್ನು ಭುವನಗಿರಿಗೆ ಸ್ಥಳಾಂತರಿಸಿದಳು. | |
| 23. | ಪೋರ್ಚುಗೀಸರು ಭಾರತೀಯರನ್ನು ಯಾವ ರೀತಿಯಲ್ಲಿ ಆರ್ಥಿಕವಾಗಿ ಶೋಷಣೆ ಮಾಡುತ್ತಿದ್ದರು ?<br>*ಉತ್ತರ :*<br>ಪೋರ್ಚುಗೀಸರು ಭಾರತೀಯ ರೈತರು ಕಷ್ಟಪಟ್ಟು, ಬೆವರು ಸುರಿಸಿ ಬೆಳೆದ ಏಲಕ್ಕಿ, ಅಕ್ಕಿ, ಮೆಣಸು ಮತ್ತು ನೇಕಾರರು ನೇಯ್ದ ಬಟ್ಟೆಗಳನ್ನು ಕಡಿಮೆ ಬೆಲೆಗೆ ಕೊಳ್ಳುತ್ತಿದ್ದರು. ಅನ್ಯಾಯವಾಗಿ ಭಾರತೀಯರಿಂದ ವಾರ್ಷಿಕ ಕಪ್ಪ ಪಡೆಯುತ್ತಿದ್ದರು. ಈ ರೀತಿ ಪೋರ್ಚುಗೀಸರು ಭಾರತೀಯರನ್ನು ಆರ್ಥಿಕವಾಗಿ ಶೋಷಣೆ ಮಾಡುತ್ತಿದ್ದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 24. | 'ಕಟ್ಟತೇವ ನಾವು' ಕವಿತೆಯಲ್ಲಿ ಕವಿ ಯಾವೆಲ್ಲ ಮನಸ್ಸುಗಳನ್ನು ಕಟ್ಟಿ ವೈಮನಸ್ಸನ್ನು ತೊಡೆದು ಹಾಕುತ್ತೇವೆ ಎಂದು ಹೇಳುತ್ತಾರೆ ?<br>***ಉತ್ತರ :***<br>ಸಮಾಜದಲ್ಲಿನ ತಾರತಮ್ಯ ಸರ್ವರ ಏಳಿಗೆಗೆ ಮಾರಕವಾಗಿದೆ. ಸಮಾಜದಲ್ಲಿ ಅಸಮಾನತೆ, ಜಾತಿ ಪದ್ಧತಿ ದೊಡ್ಡ ಸಮಸ್ಯೆಯಾಗಿದೆ. ಸಮಾಜದ ಹಿತದೃಷ್ಟಿಯಿಂದ ಹೋರಾಟದ ಹಾದಿ ಅನಿವಾರ್ಯವಾಗಿದೆ. ಸಮಾಜದ ಒಡಕಿಗೆ ಕಾರಣವಾದ ಮನಸ್ಸುಗಳನ್ನು, ತುಳಿತಕ್ಕೆ ಒಳಗಾದವರು ಕಂಡ ಕನಸುಗಳನ್ನು ಒಂದು ಮಾಡಿ, ನೂರಾರು ಮನಸುಗಳು ಕಂಡ ಕೋಟಿ ಕನಸುಗಳೂ ನನಸಾಗುವಂತೆ ಮಾಡಿ. ಆ ಮೂಲಕ ಜನರ ನಡುವಿನ ವೈಮನಸ್ಸನ್ನು ತೊಡೆದು ಹಾಕುತ್ತೇವೆ ಎಂದು ಹೇಳುತ್ತಾರೆ. | |
| 25. | ಗ್ರಂಥಾಲಯವನ್ನು ಹೊಕ್ಕೊಡನೆಯೇ ಕವಿಗೆ ಆದ ಅನುಭವವೇನು ?<br>***ಉತ್ತರ :***<br>ಗ್ರಂಥಾಲಯ ಹೊಕ್ಕೊಡನೆಯೇ ಕವಿಯ ಕಣ್ಣ ದೃಷ್ಟಿ ಹರಿದ ಕಡೆಯಲ್ಲಿ ಗ್ರಂಥಗಳು ಪರ್ವತಗಳ ಸಾಲಿನಂತೆ ಕಂಡವು. ಪುಸ್ತಕಗಳ ರಾಶಿಯ ಮುಂದೆ ಧೂಳ ಕಣದಂತೆ ಅವರಿಗೆ ಭಾಸವಾಯಿತು. ಆ ಗ್ರಂಥ ರಾಶಿಯ ಮುಂದೆ ನಿಂತಾಗ ಅವರ ಬುದ್ಧಿ ಮುದುಡಿಹೋಗಿ, ಅವರ ಅಹಂಕಾರ ನಾಶವಾಗಿ ಅಲ್ಪತೆಯ ಅರಿವು ಉಂಟಾದಂತೆ ಅನುಭವವಾಯಿತೆಂದು ಕವಿ ಹೇಳಿದ್ದಾರೆ. | |
| 26. | ಸಿ.ಪಿ.ಕೆ.ಯವರು 'ಹಿರಿಬಾಳುಗಳ ಪಳೆಯುಳಿಕೆ' ಎಂದು ಯಾವುದನ್ನು ಕರೆದಿದ್ದಾರೆ ? ಏಕೆ ?<br>***ಉತ್ತರ :***<br>ಕವಿ ಸಿ.ಪಿ.ಕೆ.ಯವರು ಗ್ರಂಥಾಲಯವನ್ನು 'ಹಿರಿಬಾಳುಗಳ ಪಳೆಯುಳಿಕೆ' ಎಂದು ಕರೆದಿದ್ದಾರೆ. ಅವರು ಗ್ರಂಥಾಲಯವನ್ನು ಹೊಕ್ಕಾಗ ಇಡೀ ವಿಶ್ವವೇ ಇಲ್ಲಿ ಅಡಗಿದೆ ಅನಿಸಿತು. ಕಣ್ಣದೃಷ್ಟಿ ಹರಿಯುವವರೆಗೂ ಗ್ರಂಥಗಳು ಪರ್ವತಗಳ ಸಾಲಿನಂತೆ ಕಂಡವು. ಪುಸ್ತಕಗಳ ರಾಶಿಯ ಮಧ್ಯೆ ಧೂಳ ಕಣದಂತೆ ಅವರಿಗೆ ಭಾಸವಾಯಿತು. ಒಂದು ಕ್ಷಣ ನಿಂತರೂ ಅವರ ಅಹಂಕಾರ ನಾಶವಾಗಿ ಅಲ್ಪತೆಯ ಅರಿವು ಉಂಟಾಗುತ್ತದೆ ಎಂಬ ಭಾವನೆ ಮೂಡಿತು. ಆ ಗ್ರಂಥರಾಶಿ ಹಿರಿಬಾಳುಗಳ ಮೇಳ ನೆರೆದಂತೆ ಅನ್ನಿಸಿ, ಅಂಥ ಹಿರಿಬಾಳುಗಳ ಜ್ಞಾನದ ಪಳೆಯುಳಿಕೆಯೇ ಗ್ರಂಥಾಲಯ ಎಂಬ ಭಾವನೆ ಮೂಡಿದ್ದರಿಂದ ಆ ರೀತಿ ಕರೆದಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 27. | 'ಗ್ರಂಥಾಲಯ' ಕವನದಲ್ಲಿ ಪಾರ್ಥನಿಗೆ ಕವಿ ತಮ್ಮನ್ನು ಹೋಲಿಸಿಕೊಂಡಿರುವುದು ಮೆಚ್ಚುವಂಥದ್ದು ಏಕೆ ?<br>***ಉತ್ತರ :***<br>ಹಿರಿಬಾಳುಗಳ ಪಳೆಯುಳಿಕೆಯಂತಿದ್ದ ಗ್ರಂಥಾಲಯವನ್ನು ಕಂಡಾಗ ಕವಿ ಸಿ.ಪಿ.ಕೆ.ಯವರಿಗೆ ಜ್ಞಾನ ಸಾಗರವನ್ನೇ ಕಂಡಂತೆ ಆಯಿತು. ಆ ಗ್ರಂಥರಾಶಿ ಜ್ಞಾನದ ವಿಶ್ವರೂಪ ದರ್ಶನದಂತೆ ಭಾಸವಾಯಿತು. ಆಗ ಅವರಿಗೆ ಮಹಾಭಾರತದಲ್ಲಿ ಶ್ರೀ ಕೃಷ್ಣನು ತೋರಿಸಿದ ವಿಶ್ವರೂಪ ದರ್ಶನದಿಂದ ಪಾರ್ಥನು ತತ್ತರಿಸಿ ಭೀತ ವಿಸ್ಮಿತನಾಗಿ ನಿಂತ ಸಂದರ್ಭ ನೆನಪಿಗೆ ಬಂದಿತು. ಗ್ರಂಥರಾಶಿಯ ಮುಂದೆ ಆದ ಜ್ಞಾನದ ವಿಶ್ವರೂಪದರ್ಶನದಿಂದ ಭೀತವಿಸ್ಮಿತರಾಗಿ ಪಾರ್ಥನಿಗೆ ತಮ್ಮನ್ನು ಹೋಲಿಸಿಕೊಂಡಿರುವುದು ಮೆಚ್ಚುವಂಥದ್ದು. | |
| 28. | ಮಳೆಗಾಲದ ಮೋಡಗಳನ್ನು ನೋಡಿದಾಗ ರೈತನಿಗೆ ಉಂಟಾಗುವ ಭಾವನೆಗಳೇನು ?<br>***ಉತ್ತರ :***<br>ರೈತನು ಪೂರ್ವದಿಕ್ಕಿನಲ್ಲಿ ಚಿತ್ತಾರ ಮೂಡಿಸುವಂತೆ ಕಂಡುಬರುವ ಮಳೆಗಾಲದ ಮೋಡಗಳನ್ನು ನೋಡಿ ಮೋಡದ ಸೌಂದರ್ಯವನ್ನು ವರ್ಣಿಸುತ್ತಾನೆ ಬಿಳಿಗೋಡೆಗೆ ಕಪ್ಪುಬಣ್ಣ ಬಳಿದಿರುವಂತೆ ಭಾಸವಾಯಿತು. ಮೋಡಗಳು ಆಕಾಶವನ್ನೇ ಆವರಿಸಿದಾಗ ಭೋರ್ಗರೆಯುತ್ತಾ ಭೂಮಿಗೆ ಹೆಚ್ಚುಮಳೆ ಸುರಿಯುವುದೇನೋ ಎಂಬ ಭಾವನೆ ರೈತನಿಗೆ ಉಂಟಾಗುತ್ತದೆ. | |
| 29. | ಸ್ವಾತಿ ಮಳೆ ಸುರಿದಾಗ ರೈತನಿಗಾಗುವ ಲಾಭಗಳೇನೆಂದು ಜನಪದಗೀತೆಯಲ್ಲಿ ಹೇಳಿದೆ ?<br>***ಉತ್ತರ :***<br>ಸ್ವಾತಿ ಮಳೆ ಸುರಿದಾಗ ಸಾವಿರಾರು ಕೆರೆಗಳು ತುಂಬುತ್ತವೆ. ಹಾಗೆ ತುಂಬಿದ ಕೆರೆಯಲ್ಲಿ ಕುಚ್ಚಲು ಮೀನುಗಳು ಎಂಬ ವಿಶೇಷ ಜಾತಿಯ ಮೀನುಗಳು ಸಮೃದ್ಧವಾಗಿ ಕಾಣುತ್ತವೆ. ಮೀನುಗಳು ತುಂಬಿದ ಕೆರೆಯಲ್ಲಿ ಆಟವಾಡುತ್ತಾ, ನಗುತ್ತಾ ಸಂತೋಷದಿಂದಿರುತ್ತವೆ. ರೈತನೂ ಸ್ವಾತಿ ಮಳೆಯಿಂದ ಸಮೃದ್ಧವಾಗಿ ಬೆಳೆ ಬೆಳೆದು ಸುಖಜೀವನವನ್ನು ಹೊಂದಿ ಸಂತೋಷ, ಸಂಭ್ರಮದಿಂದ ಇರುತ್ತಾನೆಂದು ಜನಪದಗೀತೆಯಲ್ಲಿ ಹೇಳಿದೆ. | |
| 30. | ಈರಪ್ಪ ಎಂ. ಕಂಬಳಿಯವರ ಬಿಳಿಯ ಶರ್ಟು ಕೆಂಪು ಬಣ್ಣಕ್ಕೆ ತಿರುಗಿದ್ದೇಕೆ ?<br>***ಉತ್ತರ :***<br>ಈರಪ್ಪ ಎಂ. ಕಂಬಳಿಯವರು ಬಸ್ಸಿನ ಟಾಪ್ ಮೇಲೆ ಪ್ರಯಾಣಿಸುತ್ತಿದ್ದರು. ಅವರು ಮಣ್ಣಿನಿಂದ ಕೂಡಿದ ರಸ್ತೆಯಲ್ಲಿ ಹೋಗಬೇಕಾಗಿತ್ತು. ಬಸ್ಸು ನಿಂತಾಗಲೆಲ್ಲ ಹಿಂದೆ ಎದ್ದ ಧೂಳು–ದುಮ್ಮ ಮೈಮೇಲೆಲ್ಲ ಇಳಿದು ಅವರು ಹಾಕಿದ್ದ ಬಿಳಿ ಶರ್ಟು ಕೆಂಪು ಬಣ್ಣಕ್ಕೆ ತಿರುಗುತ್ತಿತ್ತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಸಂದರ್ಭಸಹಿತ ವಿವರಣೆ :** | 4 × 3 = 12 |
| | ಪದ್ಯದ ಹೆಸರು, ಕೃತಿ–ಕರ್ತೃ | 1 ಅಂಕ |
| | ಯಾರು–ಯಾರಿಗೆ, ಸಂದರ್ಭ ವಿವರಣೆಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | "ನನ್ನ ಖೈದಿಯ ರಕ್ಷಣೆಯನ್ನು ನಾನು ಸರಿಯಾಗಿ ಮಾಡಬೇಕಷ್ಟೆ."<br>***ಉತ್ತರ :***<br>ಈ ವಾಕ್ಯವನ್ನು ಗೂರೂರು ರಾಮಸ್ವಾಮಿ ಅಯ್ಯಂಗಾರ್ ವಿರಚಿತ 'ಅಮೆರಿಕದಲ್ಲಿ ಗೊರೂರು' ಎಂಬ ಪ್ರವಾಸ ಕಥನದಿಂದ ಆರಿಸಲಾದ 'ಲಾಕಪ್‌ನಲ್ಲಿ ಒಂದು ರಾತ್ರಿ' ಎಂಬ ಪಾಠದಿಂದ ಆರಿಸಲಾಗಿದೆ. ಈ ಮಾತನ್ನು ಅಮೆರಿಕಾದ ಪೊಲೀಸಿನವನು ಗೊರೂರರಿಗೆ ಹೇಳಿದನು.<br>ಗೊರೂರರು ಅಮೆರಿಕಾದ ಮಿನಿ ಪೊಲೀಸ್ ನಗರದಲ್ಲಿ ರಾತ್ರಿ ವೇಳೆ ದಾರಿತಪ್ಪಿಸಿಕೊಂಡು ಟ್ರಾಫಿಕ್ ಪೊಲೀಸ್‌ನ ಸಹಾಯ ಕೇಳಿದಾಗ, ಪೊಲೀಸನು ಗೊರೂರರನ್ನು ಮನೆಗೆ ಕರೆದುಕೊಂಡು ಬಂದು ಉಪಚರಿಸಿದನು. ಅಲ್ಲದೆ ಮಲಗುವ ವ್ಯವಸ್ಥೆಯನ್ನು ಮಾಡಿ ಇಲ್ಲಿ ಸೊಗಸಾದ ನಿದ್ರೆ ಬರುತ್ತದೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.<br>ಇಲ್ಲಿ ಪೊಲೀಸ್‌ನವನು ಗೊರೂರರ ಬಗ್ಗೆ ತೋರಿದ ಕಾಳಜಿಯನ್ನು, ಆತನ ಹಾಸ್ಯ ಪ್ರವೃತ್ತಿಯನ್ನು ಕಾಣಬಹುದು. | |
| 32. | "ದೇಹದಲ್ಲಿ ಪ್ರಾಣವಿರುವವರೆಗೆ ಇದನ್ನು ಕೆಳಗಿಡಲಾರೆ"<br>***ಉತ್ತರ :***<br>ಈ ವಾಕ್ಯವನ್ನು ಪ್ರೊ. ಎಸ್.ಆರ್. ರೋಹಿಡೇಕರ್ ಬರೆದಿರುವ 'ರಾಮಸಿಂಗ್ ಚೌಕಾ' ಎಂಬ ಏಕಾಂಕ ನಾಟಕದಿಂದ ಆರಿಸಲಾದ 'ಧ್ವಜರಕ್ಷಣೆ' ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ರಾಮಸಿಂಗನು ಕುಲಕರ್ಣಿಗೆ ಹೇಳಿದನು.<br>ಸತ್ಯಾಗ್ರಹಿಗಳು ಸತ್ಯಾಗ್ರಹ ಮಾಡುತ್ತಿದ್ದ ಸ್ಥಳಕ್ಕೆ ಬಂದ ಕುಲಕರ್ಣಿ ರಾಮಸಿಂಗನಿಗೆ ಕೈಯಲ್ಲಿ ಹಿಡಿದಿದ್ದ ರಾಷ್ಟ್ರ ಧ್ವಜವನ್ನು ಕೆಳಗಿಡುವಂತೆ ಹೇಳಿದಾಗ ರಾಮಸಿಂಗನು ತನ್ನ ದೇಹದಲ್ಲಿ ಪ್ರಾಣವಿರುವವರೆಗೂ ಧ್ವಜವನ್ನು ಕೆಳಗೆ ಇಡಲಾರೆ ಎಂದು ಹೇಳುತ್ತಾನೆ.<br>ಇಲ್ಲಿ ರಾಮಸಿಂಗನ ರಾಷ್ಟ್ರಭಕ್ತಿ ಮತ್ತು ಕೊನೆ ಉಸಿರಿರುವವರೆಗೆ ಹೋರಾಡುವ ತ್ಯಾಗ ಮನೋಭಾವವನ್ನು ಕಾಣಬಹುದು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 33. | "ತನ್ನ ಬಣ್ಣಿಸಬೇಡ"<br>***ಉತ್ತರ :***<br>ಈ ವಾಕ್ಯವನ್ನು ಡಾ. ಎಂ.ಎಂ. ಕಲಬುರ್ಗಿಯವರು ಸಂಪಾದಿಸಿದ 'ಬಸವಣ್ಣನವರ ವಚನಗಳು' ಎಂಬ ಕೃತಿಯಿಂದ ಆರಿಸಿದ 'ಬಸವಣ್ಣನವರ ವಚನಗಳು' ಎಂಬ ಪದ್ಯದಿಂದ ಆರಿಸಿದೆ. ಈ ಮಾತನ್ನು ವಚನಕಾರರು ಸಾಮಾನ್ಯ ಜನರಿಗೆ ಹೇಳಿದ್ದಾರೆ.<br>ಬಸವಣ್ಣನವರು ಅಂತರಂಗ, ಬಹಿರಂಗ ಶುದ್ಧಿಯಿಂದ ದೇವರನ್ನು ಒಲಿಸುವ ಪರಿಯನ್ನು ತಿಳಿಸುತ್ತಾ ಅನ್ಯರಿಗೆ ಅಸಹ್ಯ ಪಡಬಾರದು, ಸುಳ್ಳು ಹೇಳಬಾರದು, ಬೇರೆಯವರನ್ನು ಹಳಿಯಬಾರದು ಅದರಂತೆ ತನ್ನ ಬಗ್ಗೆ ತಾನೇ ವರ್ಣಿಸಿ ಹೇಳಿಕೊಳ್ಳಬಾರದು ಎಂದು ಹೇಳುವಲ್ಲಿ ಈ ಮಾತು ಬಂದಿದೆ.<br>ಇಲ್ಲಿ ದೇವರನ್ನು ಒಲಿಸಿಕೊಳ್ಳಲು ತಮ್ಮ ಬಗ್ಗೆ ತಾವೇ ವರ್ಣಿಸಿಕೊಂಡು ಅಹಂಕಾರ ಪಡಬಾರದಂದು ಹೇಳಿರುವುದನ್ನು ಕಾಣಬಹುದು. | |
| 34. | "ನಾನು ಎಂಬುದು ಬಿಟ್ಟು ಜ್ಞಾನಿಗಳೊಡನಾಡಿ"<br>***ಉತ್ತರ :***<br>ಈ ವಾಕ್ಯವನ್ನು 'ಪುರಂದರ ಸಾಹಿತ್ಯ ದರ್ಶನ' ಸಂಪುಟ–೧ ರಲ್ಲಿ ಇರುವ 'ಉದರ ವೈರಾಗ್ಯ' ಎಂಬ ಕೀರ್ತನೆಯಿಂದ ಆರಿಸಲಾಗಿದೆ.<br>ದಾಸರು ಡಾಂಭಿಕ ಭಕ್ತನ ತೋರಿಕೆಯ ಭಕ್ತಿ ಪ್ರದರ್ಶನ ಮತ್ತು ವಂಚನೆಯಿಂದಲಿ ಪೂಜೆ ಮಾಡುವುದನ್ನು ವರ್ಣಿಸುತ್ತಾ 'ನಾನು' ಎಂಬ ಅಹಂಕಾರವನ್ನು ಬಿಟ್ಟು ಜ್ಞಾನಿಗಳೊಡನೆ ಸೇರಿ, ಈ ಲೋಕದಲ್ಲಿ ಏನೇ ಸಂಭವಿಸಿದರೂ ಅದು ಹರಿ ಪ್ರೇರಣೆಯಿಂದ ಎಂದು ತಿಳಿದು ಮೌನವಾಗಿ ದೇವರನ್ನು ಧ್ಯಾನಿಸಬೇಕು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.<br>ಇಲಿ ಭಕ್ತನಾದವನು ನಾನು ನನ್ನದು ಎಂಬ ಅಹಂಕಾರವನ್ನು ಬಿಟ್ಟು ಜ್ಞಾನಿಗಳೊಡನೆ ಸೇರಿ ಹರಿಭಕ್ತನಾಗಬೇಕೆಂಬುದನ್ನು ಕಾಣಬಹುದು. | |
| 35. | **ಪದ್ಯಭಾಗ ಪೂರ್ಣ ಮಾಡುವುದು :**<br>(ತಪ್ಪಿಲ್ಲದೆ ಬರೆದ ಪೂರ್ಣ ಸಾಲುಗಳಿಗೆ ಒಟ್ಟು ಮೂರು ಅಂಕಗಳು)<br>ಜಾತಿ ..............................................<br>.............................................. ಇಲ್ಲದ<br>..............................................<br>ಕುಲವೆನ್ನದ ..............................................<br>..............................................<br>.............................................. ಕಟ್ಟುತೇವ.<br>***ಅಥವಾ*** | 1 × 3 = 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಕ್ರಾಂತಿ ..................................................<br>.................................................... ನಾವು<br>........................................................<br>ರಕ್ತಗಾಲಿನ ...............................................<br>........................................... ಬರೆಯತೇವ.<br>***ಉತ್ತರ :***<br>ಜಾತಿ ಇಲ್ಲದ<br>ಭೀತಿ ಇಲ್ಲದ<br>ಬಾಳ ಕಟ್ಟತೇವ<br>ಕುಲವೆನ್ನದ ಮನುಕುಲವ<br>ನಾವು ಕಟ್ಟತೇವ<br>ನಾವು ನಾಡ ಕಟ್ಟತೇವ<br>***ಅಥವಾ***<br>ಕ್ರಾಂತಿ ಕೆಂಡದ<br>ಕುಂಡ ಹೊತ್ತು ನಾವು<br>ಮುಳ್ಳು ತುಳಿಯತೇವ<br>ರಕ್ತಗಾಲಿನ ನಮ್ಮ ಪಾಲಿನ ಹಾಡ ಬರೆಯತೇವ<br>ನೆಲಕ ಹಾಡ ಬರೆಯತೇವ | |
| | **ಕವಿಗಳ ಕಾಲ, ಜನ್ಮಸ್ಥಳ, ಕೃತಿಗಳನ್ನು ವಿವರಿಸಿ ಬರೆಯುವುದು :** | $2 \times 3 = 6$ |
| | ಜನ್ಮಸ್ಥಳ, ಕಾಲಕ್ಕೆ | 1 ಅಂಕ |
| | ಕೃತಿಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 36. | *ಗೊರೂರು ರಾಮಸ್ವಾಮಿ ಅಯ್ಯಂಗಾರ್ :*<br>***ಉತ್ತರ :***<br>ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ೧೯೦೪ ನೇ ಜುಲೈ ೪ ರಂದು ಹಾಸನ ಜಿಲ್ಲೆಯ ಗೊರೂರಿನಲ್ಲಿ ಜನಿಸಿದರು. ಇವರು ಬರೆದ ಕೃತಿಗಳೆಂದರೆ 'ನಮ್ಮ ಊರಿನ ರಸಿಕರು', 'ಹೇಮಾವತಿ', 'ಗರುಡಗಂಬದ ದಾಸಯ್ಯ', 'ಮೆರವಣಿಗೆ', 'ಅಮೆರಿಕದಲ್ಲಿ ಗೊರೂರು' ಎಂಬ ಪ್ರವಾಸ ಕಥನ, 'ಬೂತಯ್ಯನ ಮಗ ಅಯ್ಯು', 'ಹಳ್ಳಿಯ ಹಾಡು' ಮುಂತಾದ ಕೃತಿಗಳು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 37. | ಕೆ.ಎಸ್. ನಿಸಾರ್ ಅಹಮದ್ :<br>***ಉತ್ತರ :***<br>ಕೆ.ಎಸ್. ನಿಸಾರ್ ಅಹಮದ್ ಅವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ ೧೯೩೬ ರ ಫೆಬ್ರವರಿ ೫ ರಂದು ಜನಿಸಿದರು.<br>ಇವರು 'ಮನಸು ಗಾಂಧಿ ಬಜಾರು', 'ನೆನೆದವರ ಮನದಲ್ಲಿ', 'ಸುಮುಹೂರ್ತ', 'ಸಂಜೆ ಐದರ ಮಳೆ', 'ಅನಾಮಿಕ ಆಂಗರು', 'ನಾನೆಂಬ ಪರಕೀಯ', 'ನಿತ್ಯೋತ್ಸವ', 'ಸ್ವಯಂ ಸೇವೆಯ ಗಿಳಿಗಳು', 'ನವೋಲ್ಲಾಸ' 'ಸಮಗ್ರ ಕವಿತೆಗಳು' ಮುಂತಾದ ಕವನ ಸಂಕಲನಗಳನ್ನು ರಚಿಸಿದ್ದಾರೆ. 'ಹಕ್ಕಿಗಳು' ಎಂಬ ಮಕ್ಕಳ ಪುಸ್ತಕವನ್ನು ರಚಿಸಿದ್ದಾರೆ.<br>**ಎಂಟು–ಹತ್ತು ವಾಕ್ಯಗಳಿಗೆ ಮೀರದಂತೆ ಉತ್ತರಿಸುವುದು :** | $2 \times 4 = 8$ |
| | ವಿಷಯಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 38. | ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ' ಬೀಚಿಯವರಿಗೆ ಮೆಚ್ಚುಗೆಯಾಗಲು ಕಾರಣವೇನು ?<br>***ಅಥವಾ***<br>ಶಂ.ಬಾ. ಜೋಶಿಯವರ 'ಯಕ್ಷಪ್ರಶ್ನೆ' ಕೃತಿಯು ಬೀಚಿಯವರ ಮನಸ್ಸನ್ನು ಸೂರೆಗೊಂಡಿತು ಏಕೆ ?<br>***ಉತ್ತರ :***<br>ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ' ಬೀಚಿಯವರ ಮನಸ್ಸಿನ ಮೇಲೆ ಪ್ರಭಾವ ಬೀರಿದ ಪುಸ್ತಕಗಳಲ್ಲೊಂದು. 'ಮಂಕುತಿಮ್ಮನ ಕಗ್ಗ' ಲೌಕಿಕವೂ, ಪಾರಮಾರ್ಥಿಕವೂ ಆಗಿದ್ದು, ಅದನ್ನು ಓದಿದಾಗ ಬೀಚಿಯವರಿಗೆ ವೇದಾಂತದ ನೆನಪು ಉಂಟಾಗುತ್ತದೆ. ವೇದಾಂತ ಅಂದೊಡನೆ ಅನೇಕರಿಗೆ ಕಹಿ ಕುಡಿದಂತಾಗುತ್ತದೆ. ಆದರೆ ಡಿ.ವಿ.ಜಿ.ಯವರು ಅಂತಹ ಶುಷ್ಕ ವೇದಾಂತವನ್ನು ಶೃಂಗಾರದಷ್ಟು ಸ್ವಾರಸ್ಯವಾಗಿ ಮಾಡಿಕೊಟ್ಟಿದ್ದಾರೆ. ಉಪಮಾನಗಳಂತೂ ಚಿಕ್ಕ ಮಕ್ಕಳಿಗೂ ಅರ್ಥವಾಗುವಷ್ಟು ಸಾಮಾನ್ಯವಾಗಿವೆ. ಸಾಮಾಜಿಕ ಪ್ರಜ್ಞೆ, ಸರಕಾರಗಳ ವಿಷಯವನ್ನು ಬಹು ರಸವತ್ತಾಗಿ ವರ್ಣಿಸಿದ್ದಾರೆ. ಸರಕಾರ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಹರಿಗೋಲಿದ್ದ ಹಾಗೆ ಎಂದು ಹೋಲಿಸಿ ಸುರೆ ಕುಡಿದವರು ಕೆಲವರು ಹುಟ್ಟು ಹಾಕುವರು. ಅಲ್ಲಿ ತೆರೆ ಸುಳಿಗಳೂ ಇವೆ. ಬಿರುಗಾಳಿ ಬೀಸಿದಾಗ ಜನವೆದ್ದು ಕುಣಿಯುತ್ತಾರೆ. ಉರುಳದೇ ಇರುವುದೇ ಆಶ್ಚರ್ಯವೋ ಎಂಬಂತೆ ಇಂದಿನ ರಾಜಕಾರಣಕ್ಕೆ ಹೋಲಿಸಿರುವುದು 'ಮಂಕುತಿಮ್ಮನ ಕಗ್ಗ' ಬೀಚಿಯವರಿಗೆ ಮೆಚ್ಚುಗೆಯಾಯಿತು. | |
| | ***ಅಥವಾ*** | |
| | ಬೀಚಿಯವರ ಮನಸ್ಸನ್ನು ಸೂರೆಗೊಂಡ ಕೃತಿ ಶಂ.ಬಾ. ಜೋಶಿಯವರ 'ಯಕ್ಷಪ್ರಶ್ನೆ'ಯೂ ಒಂದಾಗಿದೆ. 'ಯಕ್ಷಪ್ರಶ್ನೆ'ಯು ಹಳೆಯ ಪೌರಾಣಿಕ ಕಥೆಯನ್ನು ಒಳಗೊಂಡಿದ್ದರೂ ಹೊಸ ಕಣ್ಣಿನಿಂದ ನೋಡುವ ಅವರ ಸಂಶೋಧನಾ ಪದ್ಧತಿ ಅಸದೃಶ ಮತು ಹೊಸತನವನ್ನು ಉಂಟು ಮಾಡುತ್ತದೆ. ಹೊರನೋಟಕ್ಕೆ ಕೇವಲ ಗೊಡ್ಡು ಪುರಾಣದ ಕಥೆಗಳಂತೆ ಕಾಣುವ ಕಥೆಗಳು ನಮ್ಮ ಧರ್ಮಗ್ರಂಥಗಳಲ್ಲಿವೆ. ಆ ಕಥೆಗಳಿಗೆ, ಉಪಕಥೆಗಳಿಗೆ ಜೋಶಿಯವರು ಕೊಡುವ ಅರ್ಥ ಕನ್ನಡಕ್ಕೆ ಹೊಸದಾಗಿ ಕಂಡುಬರುತ್ತದೆ. ಅಂದಿನ 'ಯಕ್ಷಪ್ರಶ್ನೆ'ಯ ಕಥೆಯು ನಮ್ಮ ಇಂದಿನ ಸಮಾಜದ ದರ್ಶನವನ್ನು ಮಾಡಿಸುತ್ತದೆ. 'ದಯವಿಟ್ಟು ಇದನ್ನು ಓದಿ' ಎಂದು ಬೀಚಿಯವರು ಎಲ್ಲರಿಗೂ ಕರೆ ನೀಡುವಷ್ಟು ಪ್ರಭಾವ ಬೀರಿ 'ಯಕ್ಷಪ್ರಶ್ನೆ' ಕೃತಿ ಅವರ ಮನಸ್ಸನ್ನು ಸೂರೆಗೊಂಡಿದೆ. | |
| 39. | ಪುರಂದರದಾಸರ ಕೀರ್ತನೆಯಲ್ಲಿ ಡಂಭಾಚಾರದ ಭಕ್ತಿಯ ಸ್ಪಷ್ಟ ಚಿತ್ರಣವು ಹೇಗೆ ಚಿತ್ರಿತವಾಗಿದೆ ? ವಿವರಿಸಿ. | |
| | ***ಅಥವಾ*** | |
| | ಡಾಂಭಿಕ ಭಕ್ತನು ಪರಮವೈರಾಗ್ಯಶಾಲಿ ಎನಿಸಲು ಬೂಟಕತನದಿಂದ ಪೂಜೆ ಮಾಡುವುದನ್ನು ಪುರಂದರದಾಸರು ಹೇಗೆ ವರ್ಣಿಸಿದ್ದಾರೆ ? | |
| | ***ಉತ್ತರ :*** | |
| | 'ಉದರ ವೈರಾಗ್ಯ' ಕೀರ್ತನೆಯಲ್ಲಿ ಮಹಾಭಕ್ತನಂತೆ ನಟಿಸುವ ಡಾಂಭಿಕ ಭಕ್ತನ ತೋರಿಕೆಯ ಭಕ್ತಿಯ ಪ್ರದರ್ಶನವನ್ನು ಪುರಂದರದಾಸರು ವಿಡಂಬನೆ ಮಾಡಿ ಚಿತ್ರಿಸಿದ್ದಾರೆ. ಡಾಂಭಿಕ ಭಕ್ತನು ದೇವರಾದ ಪದುಮನಾಭನಲ್ಲಿ ಸ್ವಲ್ಪವೂ ಭಕ್ತಿ ಇಲ್ಲದಿದ್ದರೂ, ತುಂಬಾ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಭಕ್ತಿ ಇರುವವನಂತೆ, ಉದಯಕಾಲದಲ್ಲೇ ಎಲ್ಲರೂ ಏಳುವುದಕ್ಕೆ ಮುಂಚೆಯೇ ಎದ್ದು, ನದಿಯಲ್ಲಿ ತಣ್ಣೀರಿನ ಸ್ನಾನಮಾಡಿ ಗಡಗಡ ಎಂದು ನಡುಗುತ್ತಾ ಮನಸ್ಸಿನಲ್ಲಿ ಮದ, ಮತ್ಸರ, ಕ್ರೋಧ ಮುಂತಾದ ಅರಿಷಡ್ವರ್ಗಗಳನ್ನು ತುಂಬಿಕೊಂಡು, ಅಕ್ಕಪಕ್ಕದವರಿಗೆ ಆಶ್ಚರ್ಯವಾಗುವಂತೆ ಡಂಭಾಚಾರದ ಭಕ್ತಿಯನ್ನು ತೋರಿಸುತ್ತಾನೆ. ಕಂಚುಗಾರನ ಅಂಗಡಿಯಂತೆ ಕಂಚು ಹಿತ್ತಾಳೆಯ ಪ್ರತಿಮೆಗಳನ್ನು ಹರಡಿ ಅವು ಮಿಂಚಲಿ ಎಂದು ಹಲವು ದೀಪಗಳನ್ನು ಹಚ್ಚುತ್ತಾನೆ. ಕೈಯಲ್ಲಿ ಜಪಮಣಿ ಹಿಡಿದು, ಬಾಯಲ್ಲಿ ಮಂತ್ರವನ್ನು ಹೇಳುತ್ತಾ ಪರಸತಿ, ಪರಧನಕ್ಕಾಗಿ ಚಿಂತೆಯನ್ನು ಮಾಡುತ್ತಾ ಪರಮ ಜ್ಞಾನಿಯಂತೆ ನಟಿಸಿ ವಂಚನೆಯಿಂದ ಪೂಜೆ ಮಾಡುತ್ತಾನೆ. ಊಟದ ಮಾರ್ಗಕ್ಕಾಗಿ ನಾಟಕದ ಸ್ತ್ರೀಯಂತೆ ಬಯಲಿನ ಡಂಭಾಚಾರವನ್ನು ತೋರಿಸುತಾ ಇರುವುದು ಡಾಂಭಿಕ ಭಕ್ತನ ಡಂಭಾಚಾರದ ಭಕ್ತಿಯ ಸ್ಪಷ್ಟ ಚಿತ್ರಣ ಚಿತ್ರಿತವಾಗಿದೆ.<br>***ಅಥವಾ***<br>'ಉದರ ವೈರಾಗ್ಯ' ಕೀರ್ತನೆಯಲ್ಲಿ ಪುರಂದರದಾಸರು ಮಹಾಭಕ್ತನಂತೆ ನಟಿಸುವ ಡಾಂಭಿಕ ಭಕ್ತನ ಬೂಟಾಟಿಕೆಯ ಭಕ್ತಿಯನ್ನು ವರ್ಣಿಸುತ್ತಾ, ಡಾಂಭಿಕ ಭಕ್ತನು ಉದಯ ಕಾಲದಲ್ಲೇ ಎದ್ದು ನದಿಯಲ್ಲಿ ಮಿಂದು. ಗಡಗಡ ನಡುಗುತ್ತಾ ಕೈಯಲ್ಲಿ ಜಪಮಣಿಯನ್ನು ಹಿಡಿದುಕೊಂಡು ಪರಮಜ್ಞಾನಿಯಂತೆ ಬಾಯಲ್ಲಿ ಮಂತ್ರವನ್ನು ಪಠಿಸುತ್ತಾ ಇರುತ್ತಾನೆ. ಮುಖದ ಮೇಲೆ ಅರಿವೆಯ ಮುಸುಕನ್ನು ಹಾಕಿಕೊಂಡು ಶ್ರೇಷ್ಠಭಕ್ತನಂತೆ ನಟಿಸುತ್ತಾನೆ. ಆದರೆ ಮನಸ್ಸಿನಲ್ಲಿ ಮದ, ಮತ್ಸರ, ಕ್ರೋಧಗಳನ್ನು ತುಂಬಿಕೊಂಡು ಅಕ್ಕಪಕ್ಕದಲ್ಲಿರುವವರಿಗೆ ಆಶ್ಚರ್ಯವಾಗುವಂತೆ ಡಂಭಾಚಾರದ ಭಕ್ತಿಯನ್ನು ತೋರಿಸುತ್ತಾನೆ. ಮನದಲ್ಲಿ ಪರಸತಿ, ಪರಧನಕ್ಕಾಗಿ ಯೋಚಿಸುತ್ತಾ ಪರಮ ವೈರಾಗ್ಯಶಾಲಿಯಂತೆ ನಟಿಸುತ್ತಾನೆ. ಇವನಿಗೆ ಸಮನಾದ ಭಕ್ತನೇ ಇಲ್ಲವೆಂಬಂತೆ ನಟಿಸಿ ಊಟದ ಮಾರ್ಗಕ್ಕಾಗಿ ನಾಟಕದ ಸ್ತ್ರೀಯಂತೆ ಬಯಲಿನ ಡಂಭಾಚಾರವನ್ನು ತೋರಿಸಿ ಸುತ್ತಮುತ್ತಲಿನ ಜನರಿಗೆ ಪರಮವೈರಾಗ್ಯಶಾಲಿ ಎನ್ನಿಸುವಂತೆ ತೋರಿಕೆಯ ಭಕ್ತಿ ಪ್ರದರ್ಶನವನ್ನು ಮಾಡುತ್ತಾ ವಂಚನೆಯಿಂದ, ಬೂಟಕತನದಿಂದ ಪೂಜೆ ಮಾಡುವುದನ್ನು ಪುರಂದರದಾಸರು ವರ್ಣಿಸಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಬಿ'** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 12 × 1 = 12 |
| 40. | ಕನ್ನಡ ವರ್ಣಮಾಲೆಯಲ್ಲಿರುವ ವರ್ಗೀಯ ವ್ಯಂಜನಾಕ್ಷರಗಳ ಸಂಖ್ಯೆ<br>(ಎ) ಒಂಬತ್ತು (ಬಿ) ಇಪ್ಪತ್ತೈದು<br>(ಸಿ) ಐದು (ಡಿ) ಎರಡು<br>***ಉತ್ತರ :*** (ಬಿ) ಇಪ್ಪತ್ತೈದು | |
| 41. | 'ಪರ್ವತ' ಪದವು ನಾಮಪದದ ಈ ಪ್ರಕಾರಕ್ಕೆ ಸೇರಿದೆ<br>(ಎ) ಅಂಕಿತನಾಮ (ಬಿ) ಅನ್ವರ್ಥಕನಾಮ<br>(ಸಿ) ಭಾವನಾಮ (ಡಿ) ರೂಢನಾಮ<br>***ಉತ್ತರ :*** (ಡಿ) ರೂಢನಾಮ | |
| 42. | ಅಬ್ಬ ಈ ವನ ಎಷ್ಟು ಸುಂದರವಾಗಿದೆ. ಈ ವಾಕ್ಯದಲ್ಲಿರಬೇಕಾದ ಲೇಖನ ಚಿಹ್ನೆ<br>(ಎ) ಪೂರ್ಣವಿರಾಮ (ಬಿ) ಅಲ್ಪವಿರಾಮ<br>(ಸಿ) ಭಾವಸೂಚಕ (ಡಿ) ಆವರಣ<br>***ಉತ್ತರ :*** (ಸಿ) ಭಾವಸೂಚಕ | |
| 43. | 'ಜೇನಿನಂತಹ ಸಿಹಿ' ಇಲ್ಲಿರುವ ಅಲಂಕಾರ<br>(ಎ) ಉಪಮಾಲಂಕಾರ (ಬಿ) ದೃಷ್ಟಾಂತಾಲಂಕಾರ<br>(ಸಿ) ರೂಪಕಾಲಂಕಾರ (ಡಿ) ಶ್ಲೇಷಾಲಂಕಾರ<br>***ಉತ್ತರ :*** (ಎ) ಉಪಮಾಲಂಕಾರ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 44. | 'ಪ್ರಾಣಿ' ಪದದ ಬಹುವಚನರೂಪ<br>(ಎ) ಪ್ರಾಣಿಗಳು (ಬಿ) ಪ್ರಾಣಿಯರು<br>(ಸಿ) ಪ್ರಾಣಿಗರು (ಡಿ) ಪ್ರಾಣಿಯಂದಿರು<br>***ಉತ್ತರ :*** (ಎ) ಪ್ರಾಣಿಗಳು | |
| 45. | 'ರಕ್ತಗಾಲಿನ' ಪದವು ಈ ಸಂಧಿಗೆ ಉದಾಹರಣೆಯಾಗಿದೆ<br>(ಎ) ಲೋಪ ಸಂಧಿ (ಬಿ) ಆಗಮ ಸಂಧಿ<br>(ಸಿ) ಗುಣ ಸಂಧಿ (ಡಿ) ಆದೇಶ ಸಂಧಿ<br>***ಉತ್ತರ :*** (ಡಿ) ಆದೇಶ ಸಂಧಿ | |
| 46. | ಮಕ್ಕಳು ಶಾಲೆಗೆ ಬರುತ್ತಾರ ಆದರೆ ಪಾಠ ಹೇಳಲು ಅಲ್ಲಿ ಸಾಕಷ್ಟು ಶಿಕ್ಷಕರಿಲ್ಲ. ಈ ವಾಕ್ಯವು<br>(ಎ) ಸಾಮಾನ್ಯ ವಾಕ್ಯ (ಬಿ) ಮಿಶ್ರ ವಾಕ್ಯ<br>(ಸಿ) ಸಂಯೋಜಿತ ವಾಕ್ಯ (ಡಿ) ಪ್ರಾಸ ವಾಕ್ಯ<br>***ಉತ್ತರ :*** (ಸಿ) ಸಂಯೋಜಿತ ವಾಕ್ಯ | |
| 47. | ಕೊಡಗಿನ ಪ್ರವಾಹದಲ್ಲಿ ಮನೆಮಠ ಕಳೆದು ಕೊಂಡ ಜನ ಅಲೆಮಾರಿಗಳಾಗಿ ಊರೂರು ಸುತ್ತಿದರು. – ಈ ವಾಕ್ಯದಲ್ಲಿ ಜೋಡುನುಡಿ ಸೂಚಿಸುವ ಪದ<br>(ಎ) ಊರೂರು (ಬಿ) ಮನೆಮಠ<br>(ಸಿ) ಅಲೆಮಾರಿಗಳು (ಡಿ) ಕೊಡಗಿನ ಪ್ರವಾಹ<br>***ಉತ್ತರ :*** (ಬಿ) ಮನೆಮಠ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 48. | ತತ್ಪುರುಷ ಸಮಾಸಕ್ಕೆ ಉದಾಹರಣೆ<br>(ಎ) ಅರಮನೆ (ಬಿ) ಹೆಬ್ಬಾಗಿಲು<br>(ಸಿ) ಮುಕ್ಕಣ್ಣು (ಡಿ) ಮುಂಗೈ<br>***ಉತ್ತರ :*** (ಎ) ಅರಮನೆ | |
| 49. | ಭೂಮಿತಾಯಿ ಮಗನಾದ ರೈತನು ಮೇಜಿನ ಮೇಲೆ ಕುಳಿತು ಕೆಲಸ ಮಾಡಲು ಸಾಧ್ಯವಿಲ್ಲ. ಈ ವಾಕ್ಯದಲ್ಲಿರುವ ಹಿಂದೂಸ್ಥಾನೀ ಪದ<br>(ಎ) ಭೂಮಿ (ಬಿ) ರೈತ<br>(ಸಿ) ತಾಯಿ (ಡಿ) ಮೇಜು<br>***ಉತ್ತರ :*** (ಬಿ) ರೈತ | |
| 50. | 'ವರುಷ' ಪದದ ತತ್ಸಮ ರೂಪ<br>(ಎ) ವರುಶ (ಬಿ) ವರುಸ<br>(ಸಿ) ವರ್ಷ (ಡಿ) ವರ್ಶ<br>***ಉತ್ತರ :*** (ಸಿ) ವರ್ಷ | |
| 51. | ಕಾಡಿಗೆ ಮತ್ತೆಮತ್ತೆ ಬೆಂಕಿಬಿದ್ದು ಧಗಧಗನೆ ಉರಿದು ಮರಗಳೆಲ್ಲ ನಾಶವಾದವು – ಈ ವಾಕ್ಯದಲ್ಲಿರುವ ಅನುಕರಣಾವ್ಯಯ<br>(ಎ) ಮತ್ತೆಮತ್ತೆ (ಬಿ) ಬೆಂಕಿಬಿದ್ದು<br>(ಸಿ) ನಾಶವಾದವು (ಡಿ) ಧಗಧಗನೆ<br>***ಉತ್ತರ :*** (ಡಿ) ಧಗಧಗನೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಸಿ'** | |
| | **(ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)** | |
| | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :** | |
| | (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) | 4 × 1 = 4 |
| | 'ಮನೆಯೇ ಮೊದಲ ಪಾಠಶಾಲೆ; ಜನನಿ ತಾನೇ ಮೊದಲ ಗುರುವು ಜನನಿಯಿಂದ ಪಾಠ ಕಲಿತ ಜನರು ಧನ್ಯರು' ಎಂಬ ಜನಜನಿತ ನುಡಿಯೊಂದಿದೆ. ನಮ್ಮೆಲ್ಲರ ಜನ್ಮದಾತೆ ತಾಯಿ. ನಮ್ಮ ಕುಟುಂಬದ, ಸಮಾಜದ, ಸಂಸ್ಕೃತಿಯ ಕೇಂದ್ರಬಿಂದು ತಾಯಿ. ಪುರುಷನ ಒಡನೆ ಹುಟ್ಟಿ, ಸಹೋದರಿಯಾಗಿ ಬೆಳೆದು ಹುಟ್ಟಿದ ಮನೆ ಮತ್ತು ಮತ್ತೊಂದು ಮನೆ ಬೆಳಗುವ ಸೊಸೆಯಾಗಿ, ಸಂಸಾರದ ನೇಗಿಲಿಗೆ ಹೆಗಲ ನೀಡಿ ದುಡಿದು ದುಡಿದು ಹೈರಾಣಾಗುತ್ತಾಳೆ. ಒಂದು ಸಂಸಾರದ, ಸಮಾಜದ, ಸಂಸ್ಕೃತಿಯ ಉಳಿವಿನ ರೂವಾರಿಯಾಗಿ, ಸಂರಕ್ಷಕಿಯಾಗಿ ತಾಯಿಯ ಸ್ಥಾನ ಬಹುದೊಡ್ಡದು. ಒಂದು ಸಂಸಾರದ ಅಥವಾ ಸಮಾಜದ ಸಂಸ್ಕೃತಿಯ ಉಳಿವು ಅಳಿವಿನ ಶ್ರೇಷ್ಠತೆ ಕನಿಷ್ಠತೆ ಎಲ್ಲವೂ ತಾಯಿಯನ್ನೇ ಅವಲಂಬಿಸಿದೆ. ಅವಳೇ ನಮ್ಮ ಸಂಸ್ಕೃತಿಯ ಪರಿಪಾಲಕಳು. ಇಡೀ ವಿಶ್ವವನ್ನು ಧ್ವನಿಸುವ ತಾಯಿ, ಶಾಂತಿದಾತೆಯಾಗಿ, ತ್ಯಾಗಮಾತೆಯಾಗಿ, ವಿಶ್ವಮಾತೆಯಾಗಿ ಚೈತನ್ಯದಾತೆಯ ರೂಪದಲ್ಲಿ ನಿಂತಿದ್ದಾಳೆ. | |
| 52. | ತಾಯಿಯ ಬಗ್ಗೆ ಇರುವ ಜನಜನಿತ ನುಡಿ ಯಾವುದು ? | |
| | ***ಉತ್ತರ :*** | |
| | 'ಮನೆಯಲ್ಲಿ ಜನನಿ ತಾನೇ ಮೊದಲ ಗುರುವಾಗಿರುತ್ತಾಳೆ. ಜನನಿಯಿಂದ ಪಾಠಕಲಿತ ಜನರು ಧನ್ಯರೆನಿಸುತ್ತಾರೆ ಎಂಬುದು ತಾಯಿಯ ಬಗ್ಗೆ ಇರುವ ಜನಜನಿತ ನುಡಿಯಾಗಿದೆ. | |
| 53. | ತಾಯಿ ಯಾವುದರ ಕೇಂದ್ರ ಬಿಂದು ? | |
| | ***ಉತ್ತರ :*** | |
| | ತಾಯಿ ಕುಟುಂಬದ, ಸಮಾಜ, ಸಂಸ್ಕೃತಿಯ ಕೇಂದ್ರ ಬಿಂದುವಾಗಿದ್ದಾಳೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 54. | ತಾಯಿ ನಮ್ಮ ಸಂಸ್ಕೃತಿಯ ಪರಿಪಾಲಕಳೆನಿಸಿದ್ದಾಳೆ ಏಕೆ ?<br>***ಉತ್ತರ :***<br>ಒಂದು ಸಂಸಾರದ ಅಥವಾ ಸಮಾಜದ ಸಂಸ್ಕೃತಿಯ ಉಳಿವು ಅಳಿವಿನ ಶ್ರೇಷ್ಠತೆ, ಕನಿಷ್ಠತೆ ಎಲ್ಲವೂ ತಾಯಿಯನ್ನೇ ಅವಲಂಬಿಸಿರುವುದರಿಂದ ತಾಯಿಯೇ ನಮ್ಮ ಸಂಸ್ಕೃತಿಯ ಪರಿಪಾಲಕಳೆನಿಸಿದ್ದಾಳೆ. | |
| 55. | ಇಡೀ ವಿಶ್ವವನ್ನು ಧ್ವನಿಸುವ ತಾಯಿ ಯಾವ ಯಾವ ರೂಪದಲ್ಲಿ ನಿಂತಿದ್ದಾಳೆ ?<br>***ಉತ್ತರ :***<br>ಇಡೀ ವಿಶ್ವವನ್ನು ಧ್ವನಿಸುವ ತಾಯಿ ಶಾಂತಿದಾತೆ, ತ್ಯಾಗಮಾತೆ, ವಿಶ್ವಮಾತೆಯಾಗಿ, ಚೈತನ್ಯದಾತೆಯ ರೂಪದಲ್ಲಿ ನಿಂತಿದ್ದಾಳೆ. | |
| 56. | **ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)**<br>* ಕೈ ಕೆಸರಾದರೆ ಬಾಯಿ ಮೊಸರು<br>* ಶಕ್ತಿಗಿಂತ ಯುಕ್ತಿ ಮೇಲು<br>* ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ<br>***ಉತ್ತರ :*** | 1 × 3 = 3 |
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ / ವಿವರಣೆ | 1 ಅಂಕ |
| | ಭಾಷಾಶೈಲಿ / ಉದಾಹರಣೆ | 1 ಅಂಕ |
| | ಒಟ್ಟು | 3 ಅಂಕಗಳು |
| 57. | **ಪತ್ರ ಲೇಖನ ಬರೆಯುವುದು :**<br>ನಿಮ್ಮನ್ನು ಬೆಂಗಳೂರಿನ ವಿಜಯ ಪ್ರೌಢಶಾಲೆಯ 'ಅರವಿಂದ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸುವ ಗಣರಾಜ್ಯೋತ್ಸವ ಸಮಾರಂಭಕ್ಕೆ ಆಹ್ವಾನಿಸಿ ಮಂಗಳೂರಿನಲ್ಲಿರುವ ನಿಮ್ಮ ತಾಯಿಗೆ ಒಂದು ಪತ್ರ ಬರೆಯಿರಿ.<br>***ಅಥವಾ*** | 1 × 4 = 4 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ನಿಮ್ಮನ್ನು ಬಳ್ಳಾರಿಯ 'ರಜತ್' ಎಂದು ಭಾವಿಸಿಕೊಂಡು, ನಿಮ್ಮ ಊರಿನ ರಸ್ತೆಗಳನ್ನು ರಿಪೇರಿ ಮಾಡಿಸಿಕೊಡುವಂತೆ ಕೋರಿ ಜಿಲ್ಲಾ ಪಂಚಾಯ್ತಿ ಅಧ್ಯಕ್ಷರಿಗೆ ಮನವಿ ಪತ್ರವೊಂದನ್ನು ಬರೆಯಿರಿ. | |
| | ***ಉತ್ತರ :*** | |
| | ವೈಯಕ್ತಿಕ ಪತ್ರ : | |
| | ಇಂದ ವಿಳಾಸ / ಸಂಬೋಧನೆ, ದಿನಾಂಕ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಗ ವಿಳಾಸ, ವಿನ್ಯಾಸ, ಸಹಿಯೊಂದಿಗೆ ಮುಕ್ತಾಯ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | ***ಅಥವಾ*** | |
| | ವ್ಯಾವಹಾರಿಕ ಪತ್ರ : | |
| | ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ, ವಿನ್ಯಾಸ, ಸಹಿಯೊಂದಿಗೆ, ಮುಕ್ತಾಯ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 58. | **ಪ್ರಬಂಧ ಬರೆವಣಿಗೆ :** | 1 × 4 = 4 |
| | ✳ ರಾಷ್ಟ್ರೀಯ ಭಾವೈಕ್ಯತೆ | |
| | ✳ ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ | |
| | ✳ ಮೊಬೈಲ್ ಬಳಕೆಯ ಉಪಯೋಗ, ದುಷ್ಪರಿಣಾಮ | |
| | ***ಉತ್ತರ :*** | |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ಜೋಡಣೆ | 1 ಅಂಕ |
| | ಮುಕ್ತಾಯ / ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |